ದಿನಾಂಕಃ 25.06.2019 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು.

**-ಃಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಸ್ ಎಸ್ ವಕೀಲರಿಂದ-**

ಬೊರೇಗೌಡ ನನ್ನ ಮಾವ. ಬೊರೇಗೌಡ ರ ಅಣ್ಣ ತಮ್ಮಂದಿರು 5 ಜನ ಇದ್ದು ಅವರು ಬೊಮ್ಮಲಿಂಗಯ್ಯ ಗೌಡ , ಬೋರೇ ಗೌಢ ರಾಮಯ್ಯ , ಇನ್ನು ಉಳಿದವರ ಹೆಸರು ನನಗೆ ನೆನಪಿರುವುದಿಲ್ಲ. ಸದರಿ ಬೊರೇಗೌಡ ನಿಗೆ 3 ಜನ ಮಕ್ಕಳು ಅವರು ಪುಟ್ಟ ಬಸವಯ್ಯ , ಬಿ. ಶ್ರಿ ಕಂಠಯ್ಯ ಮತ್ತು ಕುಮಾರ ಸ್ವಾಮಿ. ಸದರಿ ಬೊರೇಗೌಡನಿಗೆ ಹೆಣ್ಣು ಮಕ್ಕಳಿದ್ದು ಅವರು ಗೌರಮ್ಮ , ಸಾವಿತ್ರಮ್ಧ ಶಾರದಮ್ಮ, ಶಿವಮ್ಮ ಮತ್ತು ಲಕ್ಷ್ಮೀ ದೇವಮ್ಮ. ಶಿವಮ್ಮ ನನ್ನ ತಾಯಿ. ದಾವಾ ಆಸ್ತಿಗಳು ಮೂಲತಃ ಬೊರೇಗೌರರಿಗೆ ಸೇರಿರುತ್ತವೆ.

ಬೋರೆಗೌಡರು ತೀರಿ ಹೊಗಿರುತ್ತಾರೆ. ಅವರ ಹೆಂಡತಿಯ ಹೆಸರು ಗಂಗಮ್ಮ ಅವರು ಮೃತಪಟ್ಟಿರುತ್ತಾರೆ. ಸದರಿ ದಾವೆಗೆ ಬೋರಯ್ಯನ ಎಲ್ಲಾ ಗಂಡು ಮಕ್ಕಳನ್ನು ಸೇರಿಸಿರುತ್ತೇನೆ ಹೆಣ್ಣು ಮಕ್ಕಳನ್ನು ಸೇರಿಸಿರುವುದಿಲ್ಲ. ನನ್ನ ಯಜಮಾನರನ್ನು ಸದರಿ ದಾವೆಯಲ್ಲಿ ತಂದಿರುತ್ತೇನೆ. ನನ್ನ ಗಂಡ ಕುಮಾರಸ್ವಾಮಿ. ಕುಮಾರಸ್ವಾಮಿಯನ್ನು ನಾನು ನನ್ನ ಪರವಾಗಿ ದಾವೆಯಲ್ಲಿ ತಂದಿರುತ್ತೇನೆ. ನನ್ನ ಮಾವ ಮತ್ತು ಅವರ ಅಣ್ಣ ತಮ್ಮಂದಿರ ಮದ್ಯ ಬಾಗ ಆಗಿರುತ್ತದೆ. ಸದರಿ ಭಾಗವು ಯಾವ ದಿನ ನಡೆದಿರುತ್ತದೆ ನನಗೆ ಗೊತ್ತಿರುವುದಿಲ್ಲ. ಭಾಗಕ್ಕೆ ಸಂಬಂದಿಸಿದಂತೆ ದಾಖಲೆಗಳು ಇರುತ್ತದೆ. ಸದರಿ ಪಾಲು ವಿಬಾಗಕ್ಕೆ ಸಂಬಂದಿಸಿ ಪಾಲು ಪಟ್ಟಿ ಇರುತ್ತದೆ ಅದು 1982 ರಲ್ಲಿ ಆಗಿರುತ್ತದೆ. ಸದರಿ ಪಾಲು ಪಟ್ಟಿಗೆ ಯಾರು ಯಾರು ರುಜು ಮಾಡಿದ್ದಾರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಪಾಲುಪಟ್ಟಿಯಲ್ಲಿ ರುಜು ಮಾಡಿರುವ ಸಹಿಗಳನ್ನು ಸರಿಯಾಗಿ ಓದಲು ಬರುತ್ತಿಲ್ಲ ಆದರೆ ಸಿದ್ದರಾಮಯ್ಯ ಮತ್ತು ಶಿವಣ್ಣ ಎಂದು ಇದೆ. ಸಿದ್ದರಾಮಯ್ಯ ಮತ್ತು ಶಿವಣ್ಣ ರವರು ಬೋರೇಗೌಡನ ಅಣ್ಣ ತಮ್ಮಂದಿರಾಗಿರುತ್ತಾರೆ. ಬೊಮ್ಮಲಿಂಗೇಗೌಡ ನಮ್ಮ ಮಾವನ ಕುಟುಂಬದಲ್ಲಿ ಹಿರಿಯರು ಎಂದರೆ ಸರಿ. ಬೊಮ್ಮಲಿಂಗೇಗೌಡ ನ ಮಗ ಬಸವರಾಜ್ ಅಗಿದ್ದು ಅವರನ್ನು ಬಸವೇ ಗೌಡ ಅಲಿಯಾಸ್ ಬಸವರಾಜಯ್ಯ ಎಂದು ಕರೆಯಲಾಗುತ್ತದೆ ಎಂದರೆ ಸರಿ.

ಬಸವರಾಜಯ್ಯ ಮತ್ತು ಅವರ ಚಿಕ್ಕಪ್ಪಂದಿರ ಮಕ್ಕಳೆಲ್ಲರೂ ಸೇರಿ ಪಾಲು ಪಟ್ಟಿ ಮಾಡಿಕೊಂಡಿರುತ್ತಾರೆ ಎಂರದೆ ಸರಿ. ಸದರಿ ಪಾಲು ಪಟ್ಟಿಯು 1984 ರಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಪಾಲು ಪಟ್ಟಿ ಮೂಲಕ ಬೋರೇ ಗೌಡನಿಗೆ 7 ಐಟಂ ಗಳು ಆಸ್ತಿಗಳು

ಬಂದಿರುತ್ತದ ಎಂದರೆ ಸರಿ. ಐಟಂ 1 – 0.34 ಗುಂಟೆ , 4 ನೇ ಐಟಂ 4-0.10 ಗುಂಟೆ , ಐಟಂ 5 – 1.12 ಗುಂಟೆ , ಐಟಂ 6 -0.18 ಗುಂಟೆ ಐಟಂ 7-0.13 ಗುಂಟೆ, ಸರ್ವೆ ನಂ 301/03 ರಲ್ಲಿ 15 ಗುಂಟೆ , ಸರ್ವೆ ನಂ300/02 ರಲ್ಲಿ 1 ಎಕರೆ 1 ಗುಂಟೆ,ಸರ್ವೆ ನಂ 279/02 ರಲ್ಲಿ 0.18 ಗುಂಟೆ, ಮತ್ತು ಸಿದ್ದರಾಮೇ ದೇವರ ಪಾಳ್ಯ ದಲಿಲ ಒಂದು ಮನೆ ಈ ಆಸ್ತಿಗಳು ದಾವೆಯಲ್ಲಿ ತಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 284/01 34 ಗುಂಟೆ,301/02 1 ಎಕರೆ 1 ಗುಂಟೆ,322/02 2 ಎಕರೆ,239/01 1 ಎಕರೆ 12 ಗುಂಟೆ ಅರದಲಿಲ ತೋಟ ಮತ್ತು ಮನೆ ಸೇರಿಕೊಂಡಿರುತ್ತದೆ ,276 ರಲ್ಲಿ 0.36 ಗುಂಟೆ , 278 ರಲ್ಲಿ 0.14 ಗುಂಟೆ, 309/07 ರಲ್ಲಿ 0.21 ಗುಂಟೆ ಒಟ್ಟು 7 ಎಕರೆ ಹಾಗೂ ಬೆಣ್ಣೆನ ಹಳ್ಳಿಯಲಕ್ಲಿ ಒಂದು ಮನೆ ಈ ಸ್ವತ್ತನ್ನು ಆಸ್ತಿಯಲ್ಲಿ ತಂದಿರುತ್ತೇನೆ. ಬೆಣ್ಣೆನ ಹಳ್ಳಿ ಮನೆ ಯ ಖಾತೆ ಮತ್ತು ಅಸ್ಸೆಸ್ ಮೆಂಟ್ ನಂಬರ್ ಹೇಳಲು ಆಗುವುದಿಲ್ಲ. ನನಗೆ ಅದರ ಚಕ್ಕುಬಂದಿ ಗೊತ್ತು ಪೂಶವಕ್ಕೆ ಸಿದ್ದಲಿಂಗಯ್ಯನ ಪಾಳು, ಪಶ್ಚಿಮಕೆಕ ಸಿದ್ದಲಿಂಗಯ್ಯನ ಮನೆ, ಉತ್ತರಕ್ಕೆ ಸಿದ್ದಲಿಂಗಯ್ಯನ ಪಾಳು, ದಕ್ಷಿಣಕ್ಕೆ ಪುಟ್ಟ ಬಸವಯ್ಯನ ಮನೆ. ಪುಟ್ಟ ಬಸವಯ್ಯ ನನ್ನ ಹಿರಿಯ ಮಾವ.

ಪುಟ್ಟ ಬಸವಯ್ಯ ರವರ ಮನೆಯ ದಕ್ಷಿಣಕ್ಕೆ ಅವರ ಮಗ ಮನೆ ಕಟ್ಟಿಕೋಂಡಿರುತ್ತಾರೆ. ನಮಗೆ ಸಂಬಂದಿಸಿದ ಪಾಳನ್ನು ಆಗ ಮನೆ ಇರುವ ಮನೆ ಎಂದು ಸೇರಿಸಿರುತ್ತೇವೆ ಸಹ ಪಾಲು ಪಟ್ಟಿಯಲ್ಲಿ ತಂದಿರುತ್ತೇನೆ.

ನನ್ನ ಹೆಸರಿಗೆ ಪಾಲು ಪಟ್ಟಿಮಾಡಿದುದ ಅದರ ಮೂಲಕ ನನಗೆ ಮತ್ತು ನನ್ನ ಗಂಡನ ಹೆಸರಿಗೆ 239/01 ರಲಲ್ಲಿ 26 ಗುಂಟೆ ತೋಟ ಮತ್ತು ಮನೆ , 322/02 ರಲ್ಲಿ 2 ಎಕರೆ ಜಮೀನು, 309/07 ರಲ್ಲಿ 10 ಗುಂಟೆ ಜಮೀನು, ಹಾಗೂ ಬೆಣ್ಣೆನ ಹಳ್ಳಿಯ ಮನೆ ಹಾಗೂ ಹುಣಸೇ ಮರ ನನ್ನ ಮತ್ತು ಬಿ.ಶ್ರೀ ಕಂಠಯ್ಯ ಹೆಸರಿನಲ್ಲಿ ಪಾರಿಕತ್ತಿನಲ್ಲಿ ಬರೆದಿರುತ್ತಾರೆ. ನಾನು ಈಗ ಮೇಲೆ ತಿಳಿಸಿರುವ ಆಸ್ತಿಗಳು ನನ್ನ ಸ್ವಾದೀನಲ್ಲಿ ಇರುವುದಿಲ್ಲ 1 ನೇ ಪ್ರತಿವಾದಿಯ ಸ್ವಾದೀನದಲ್ಲಿರುತ್ತದೆ. ಸರ್ವೆ ನಂ 239/01 26 ಗುಂಟೆ , 278/02 ರಲ್ಲಿ 14 ಗುಂಟೆ. ಮತ್ತು ಸರ್ವೆ ನಂ 239/01 ರಲ್ಲಿ ವಾಸದ ಮನೆ ಸ್ವತ್ತುಗಳು ನನ್ನ ಸ್ವಾದೀನದಲ್ಲಿರುತ್ತವೆ.

ಸದರಿ ಪಾಲು ಪಟ್ಟಿ ನನ್ನ ಬಳಿ ನಕಲಿದ್ದು ಅದನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1984 ರಲ್ಲಿ ಬಾಗ ಆಗಿರುತ್ತದೆ.

284 /1 (ಎ) ಐಟಂ 1,2 ಸರ್ವೆ ನಂ 301/04 15 ಗುಂಟೆ , ಬೆಣ್ಣೆನ

ಹಳ್ಳಿಯಲ್ಲಿರುವ ಮನೆ ಆಸ್ತಿಗಳು ಒಂದನೇ ಮಗ ಪುಟ್ಟ ಬಸವಯ್ಯನಿಗೆ ಪಾಲು ಪಟ್ಟಿ ಮೂಲಕ ಬಂದಿರುತ್ತದೆ ಎಂದರೆ ಸರಿ. ಅವರು ತೀರಿಹೋದ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸದರಿ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ. ಪುಟ್ಟ ಬಸವಯ್ಯ ರವರು ದಾವಾ ಐಟಂ 2 ಆಸ್ತಿಯನ್ನು ಲಿಂಗಮ್ಮ ರವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿರುವುದದಿಲ್ಲ. 309/07 ರಲ್ಲಿ 19 ಗುಂಟೆ ಜಮೀನು ನಿದ್ದು ಅದರಲ್ಲಿ 9 ಲಗುಂಟೆ 1 ನೇಪ್ರತಿವಾದಿಗೆ ಹಾಗೂ 10 ಗುಂಟೆ ನನ್ನ ಗಂಡನಿಗೆ ಬಂದಿರುತ್ತದೆ. ಸರ್ವೆ ನಂ 239/01 ರಲ್ಲಿ ದಕ್ಷಿಣಕ್ಕೆ 26 ಗುಂಟೆ ಮತ್ತು ಅದರಲಿಲ ಒಂದು ಮನೆ 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿ. 279 ರಲ್ಲಿ ಇರುವ 36 ಗುಂಟೆ 1 ನೇ ಪ್ರತಿವಾದಿ ಗೆ ಸೇರಿದ್ದು ಅದನ್ನು ಗಂಗಮ್ಮ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಗಂಗಮ್ಮ ರವರು ಸೇರಿದ ಆಸ್ತಿ ಯ ಸ್ವಾ ದೀನದಲ್ಲಿರುತ್ತಾರೆಂದರ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಗಿದೆ.

ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದುಒಪ್ಪಿರುತ್ತಾರೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.
ತಿಪಟೂರು.

/